5) ಹೊಸದಾಗಿ ರಚಿತವಾದ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ಸ್ಥಾಪಿಸುವ ಕುರಿತು ಆರ್ಥಿಕ ಸಾಧ್ಯತೆಯ ಬಗ್ಗೆ ಅಧ್ಯಯನ ನಡೆಸಲು ನಬಾರ್ಡ್‌ನ ನಿವೃತ್ತ ಸಲಹೆಗಾರರಾದ ಶ್ರೀ ಆರ್. ಸುಂದರ ವರದನ್ ಇವರನ್ನು ನೇಮಿಸಲಾಗಿತ್ತು. ಆರ್ಥಿಕ ಸಾಧ್ಯತಾ ವರದಿಯನ್ನು ಆಧರಿಸಿ ಹಾಲ್ ಇರುವ ಸಂಬಂಧಿಸಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ವಿಭಜಿಸಿ ದಾವಣಗೆರೆ, ಗದಗ್, ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ಸ್ಥಾಪಿಸಲು ಆರ್. ಬಿ. ಐ. ನ ಅನುಮತಿ ಕೋರಿ ಪ್ರಸ್ತಾವನೆಯನ್ನು ನಬಾರ್ಡ್ ಮೂಲಕ ದಿನಾಂಕ: 5-9-98 ರಂದು ಸಲ್ಲಿಸಲಾಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ಸ್ಥಾಪಿಸಲು ದಿನಾಂಕ 27-9-99ರಲ್ಲೆ ನಬಾರ್ಡ್‌ಗೆ ಪ್ರಸ್ತಾವೆ ಸಲ್ಲಿಸಲಾಗಿತ್ತು.

ಚಾಮರಾಜನಗರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಆರ್ಥಿಕ ಸಾಧ್ಯತೆ ಇಲ್ಲದೇ ಇರುವ ಕಾರಣ ಪ್ರಸ್ತಾವನೆಯನ್ನು ಆರ್. ಬಿ. ಯಗೆ ಸಲ್ಲಿಸಿರುವುದಿಲ್ಲ.

ದಿನಾಂಕ 7-4-2000ರ ಪತ್ರದ ಮುಖೇನ ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಮಾತ್ರ ಹೊಸ ಜಿಲ್ಲಾ ಬ್ಯಾಂಕ್‌ಗಳನ್ನು ಸ್ಥಾಪಿಸಲು ಆರ್. ಬಿ. ಐ. ಅನುಮತಿ ನೀಡಿರುವುದನ್ನು ನಬಾರ್ಡ್ ತಿಳಿಸಿರುತ್ತದೆ. ಹಾಲಿ ಇರುವ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಜಿಲ್ಲಾ ಬ್ಯಾಂಕುಗಳನ್ನು ವಿಭಜಿಸಿ ದಾವಣಗೆರೆ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಬ್ಯಾಂಕ್ ಸ್ಥಾಪನೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಕಾಯ್ದೆ ಕಲಂ 14ರ ಪ್ರಕಾರ ಸಂಯುಕ್ತ ನಿಬಂಧಕರು (ಪತ್ತು) ಇವರು ಆದೇಶ ಹೊರಡಿಸಿರುತ್ತಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಬ್ಯಾಂಕ್ ಸ್ಥಾಪಿಸಿರುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಆಸ್ತಿ ಜವಾಬ್ದಾರಿ ವಿಭಜನೆಗೆ ಸರ್ವ ಸದಸ್ಯರ ಸಭೆಯ ಒಪ್ಪಿಗೆಯು ಅಗತ್ಯವಿರುವುದರಿಂದ ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯುವಂತೆ ಸಹಕಾರ ಸಂಘಗಳ ಕಾಯ್ದೆ ಕಲಂ30 'ಬಿ' ಪ್ರಕಾರ ಸರ್ಕಾರ ಬ್ಯಾಂಕಿಗೆ ದಿನಾಂಕ:2-2-2001 ರಂದು ನಿರ್ದೇಶನ ನೀಡಿದೆ.

ರಾಜ್ಯದಲ್ಲಿ ಆಶ್ರಯ ಮನೆಗಳ ಆಯ್ಕೆ ಪಟ್ಟಿಯ ತಡೆಹಿಡಿದಿರುವುದು

921 (1336) ಶ್ರೀ ಕೃಷ್ಣಮೂರ್ತಿ ಎ. ಆರ್. (ಸಂತೇಮರನಹಳ್ಳಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಕ್ಷೇತ್ರದ ಆಶ್ರಯ ಮನೆ ಆಯ್ಕೆ ಪಟ್ಟಿಗಳನ್ನು ಮಂಜೂರಾತಿ ನೀಡದೇ ತಡೆಹಿಡಿಯಲಾಗಿದೆ; ಯಾವ ಯಾವ ಕ್ಷೇತ್ರಗಳ ಆಯ್ಕೆ ಪಟ್ಟಿಯನ್ನು ತಡೆಹಿಡಿಯಲಾಗಿದೆ; (ವಿವರ ನೀಡುವುದು)

ಆ) ತಡೆಹಿಡಿಯಲಾಗಿರುವ ಆಯ್ಕೆ ಪಟ್ಟಿಯನ್ನು ತೆರವುಗೊಳಿಸಿ ಮಂಜೂರಾತಿ ನೀಡಲಾಗಿರುವ ಆಯ್ಕೆ ಪಟ್ಟಿಗಳು ಎಷ್ಟು; ಯಾವ ಕಾರಣದಿಂದ ತಡೆಯಾಗಿರುವ ಆಯ್ಕೆ ಪಟ್ಟಿಯನ್ನು ತೆರೆವು ಗೊಳಿಸಲಾಗಿರುತ್ತದೆ;

ಇ) ಆಯ್ಕೆ ಪಟ್ಟಿಯನ್ನು ತಡೆಹಿಡಿಯಲು ಯಾವ ಸರ್ಕಾರಿ ಮಾನದಂಡವನ್ನು ಅನುಸರಿಸಲಾಗಿದೆ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಈ ಕೆಳಕಂಡ ಕ್ಷೇತ್ರಗಳ ಆಶ್ರಯ ಮನೆ ಫಲಾನುಭವಿಗಳ ಆಯ್ಕೆ ಪಟ್ಟಿಗಳನ್ನು ತಡೆಹಿಡಿಯಲಾಗಿತ್ತು.

ಕ್ರಮ ಸಂಖ್ಯೆ	ವಿಧಾನ ಸಭಾ ಕ್ಷೇತ್ರದ ಹೆಸರು	ಕಾರಣ
1.	ಅಫ್‌ಜಲ್‌ಪುರ ಗ್ರಾಮೀಣ ಕ್ಷೇತ್ರ	ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ ಬಗ್ಗೆ
2.	ನಾಗಮಂಗಲ ಗ್ರಾಮೀಣ ಕ್ಷೇತ್ರ	ಫಲಾನುಭವಿಗಳ ಆಯ್ಕೆ ಸಮರ್ಪಕವಾಗಿಲ್ಲ ಎಂಬ ಬಗ್ಗೆ
3.	ಆರಕಲಗೂಡು ಗ್ರಾಮೀಣ ಕ್ಷೇತ್ರ	ಫಲಾನುಭವಿಗಳ ಆಯ್ಕೆ ಮಾಡುವಲ್ಲಿ ತಾರತಮ್ಯ ವೆಸಗಿ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಿರುವವರು ಎಂಬುದಕ್ಕಾಗಿ
4.	ಬೇಲೂರು ಗ್ರಾಮೀಣ	ಅಧ್ಯಕ್ಷರು ಸದಸ್ಯರ ಗಮನಕ್ಕೆ ತಾರದೇ ಫಲಾನುಭವಿಗಳ ಪಟ್ಟಿಗಳ ಸಿದ್ಧಪಡಿಸಿದ್ದು ಪಡಿಸಿದ್ದರೆಂಬುದಕ್ಕಾಗಿ
5.	ಸಂತೇಮಾರನಹಳ್ಳಿ ಗ್ರಾಮೀಣ ಕ್ಷೇತ್ರ	ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಾರೆಂಬ ಬಗ್ಗೆ
6.	ಮುಂಡರಗಿ ಗ್ರಾಮೀಣ ಕ್ಷೇತ್ರ	ಫಲಾನುಭವಿಗಳ ಪಟ್ಟಿಯನ್ನು ಸದಸ್ಯರ ಗಮನಕ್ಕೆ ತರದೇ ಸಿದ್ಧಪಡಿಸಿರುವ ಬಗ್ಗೆ.

ಆ) ಕಂಡುಹಿಡಿಯಲಾದ ಎಲ್ಲಾ ಆಯ್ಕೆ ಪಟ್ಟಿಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಂದ ವಿಚಾರಣಾ ವರದಿಗಳನ್ನು ಪಡೆದು ಪರಿಶೀಲಿಸಿ ತಡೆಯಾಜ್ಞೆಗಳನ್ನು ತೆರವುಗೊಳಿಸಲಾಗಿದೆ.

ಇ) ಆಯ್ಕೆ ಪಟ್ಟಿಯು ಸಮರ್ಪಕವಾಗಿಲ್ಲವೆಂಬ ಬಗ್ಗೆ ಬಂದ ದೂರುಗಳನ್ನು ಆಧರಿಸಿ ಅರ್ಹ ಫಲಾನುಭವಿಗಳನ್ನೇ ಆಯ್ಕೆ ಮಾಡುವ ದೃಷ್ಟಿಯಿಂದ ತಡೆಹಿಡಿಯಲಾಗಿತ್ತು.